# ಇಬ್ಬರು ನೊಬೆಲ್ ವಿಜೇತರ ನೆನಪುಗಳ ಬೀದಿಯಲ್ಲಿ...

**ಮೇರಿ ಕ್ಯೂರಿ, ಜೋಸೆಫ್ ರಾಟ್ ಬ್ಲ್ಯಾಟ್ ಸ್ಮೃತಿಪಥದಲ್ಲಿ ನಡಿಗೆ**

ವಾರ್ಸಾದ ನೋವೊಲಿಪ್ಕಿ ಬೀದಿಯಲ್ಲಿ ಮೇರಿ ಕ್ಯೂರಿ ಬಾಲ್ಯವನ್ನು ಕಳೆದ ಮನೆಯಿದೆ. ಅದೇ ರಸ್ತೆಯ ಮತ್ತೊಂದು ಭಾಗ, ವಿಶ್ವಶಾಂತಿಗೆ ಶ್ರಮಿಸಿ ನೊಬೆಲ್ ಪಡೆದ ಜೋಸೆಫ್ ರಾಟ್ ಬ್ಲ್ಯಾಟ್ ಬಾಳಿದ ಸ್ಥಳ.

**■ ಸಿಡ್ನಿ ಶ್ರೀನಿವಾಸ್**

ವಿಯೆನ್ನಾದಿಂದ ವಿಮಾನದಲ್ಲಿ ವಾರ್ಸಾಗೆ ಆಗಮಿಸಿ ಅಲ್ಲಿನ ಸೋಫಿಟೆಲ್ ಹೋಟೆಲಿನಲ್ಲಿ ಚೆಕ್ ಇನ್ ಮಾಡಿಕೊಂಡು ವಿಶ್ರಮಿಸಿ, ಅಡ್ಡಾಡೋಣವೆಂದು ಹೊರಟೆವು. ಮುಂದೆ ಅತಿ ವಿಶಾಲವಾದ ಮೈದಾನ. ಅಲ್ಲಿಗೆ ಹೋದಾಗ ಮಿಲಿಟರಿಯವರು ಅನಾಮಧೇಯ ಸೈನಿಕನಿಗೆ ದಿನದ ಅಂತ್ಯದ ಸೆಲ್ಯೂಟ್ ನೀಡುತ್ತಿದ್ದರು.

ಪಕ್ಕದಲ್ಲಿಯೇ ದೊಡ್ಡದೊಂದು ಉದ್ಯಾನ. ಎಲ್ಲೆಲ್ಲಿಯೂ ಮರಗಿಡಗಳು, ಅಲ್ಲಲ್ಲಿ ಶಿಲಾಪ್ರತಿಮೆಗಳು. ಸಂಜೆ ಸಮಯ ಬೇರೆ, ಭಾರಿ ಜನಸಂದಣಿ. ಆ ಪಾರ್ಕಿನಲ್ಲಿ ಅಡ್ಡಾಡುವಾಗ 'ಸ್ಯಾಕ್ಸ್‌ಟನ್ ತೋಟ' (Saxton Gardens) ಎನ್ನುವ ಫಲಕ ಕಾಣಿಸಿತು. ತಕ್ಷಣ ನನಗೆ ನೆನಪಾಯಿತು. ನನ್ನ 'ಮೇರಿ ಕ್ಯೂರಿ' ಪುಸ್ತಕದಲ್ಲಿ ನಾನೇ ಬರೆದಿದ್ದೇನೆ: 'ಮೇರಿ (ಆಗ ಮಾನ್ಯಾ) ಪ್ರತಿದಿನ ತನ್ನ ಗೆಳತಿ ಕಜಿಯಾ ಜತೆ ಸ್ಯಾಕ್ಸ್‌ಟನ್ ಪಾರ್ಕಿನ ಮೂಲಕ ತನ್ನ ಶಾಲೆಗೆ ನಡೆದು ಹೋಗುತ್ತಿದ್ದಳು. ಇದರ ಪಕ್ಕದ ಮೈದಾನದಲ್ಲಿ ರಷ್ಯನ್ ಸೈನಿಕರು ಕವಾಯತು ನಡೆಸುತ್ತಿದ್ದರು. ಗೆಳತಿಯರಿಬ್ಬರೂ ಆ ಸೈನಿಕರನ್ನು ಹೀನಾಯಮಾನ ಬೈದುಕೊಂಡು, ಅತ್ತ ಉಗಿದು, ಹೋಗುತ್ತಿದ್ದರು', ಇತ್ಯಾದಿ, ಇತ್ಯಾದಿ.

ರೋಮಾಂಚನವಾಯಿತು ನನಗೆ. ಆ ಪಾರ್ಕಿನಲ್ಲಿಯೇ ನಿಂತಿದ್ದೇನೆಯೇ ಹಾಗಾದರೆ? ಆದರೂ ನನಗೆ ಮತ್ತ್ಯಾರಾದರೂ ನಾನು ಅಂದುಕೊಂಡದ್ದು ನಿಜ ಎನ್ನಲಿ ಎಂಬ ಆಸೆ. ನಾನು ಮತ್ತು ನನ್ನ ಪತ್ನಿ ಉಷಾ ಅಲ್ಲಿಯೇ ನಿಂತೆವು. ಎಡತಾಕಿದ ಕೆಲವರಿಗೆ ಇಂಗ್ಲಿಷ್ ಬಾರದು. ತುಸು ಸಮಯದ ನಂತರ ಯುವ ದಂಪತಿ ಬಂದರು. ಇಬ್ಬರೂ ವಾರ್ಸಾದ ಕಾಲೇಜಿನಲ್ಲಿ ಡಾಕ್ಟೊರೇಟ್ ಮಾಡುತ್ತಿದ್ದರು. ಇಂಗ್ಲಿಷ್ ಬರುತ್ತಿತ್ತು. ನಾನು, 'ಮೇರಿ ಕ್ಯೂರಿ ಅಲ್ಲಿ ಶಾಲೆಗೆ ಹೋಗುತ್ತಿದ್ದದ್ದು ನಿಜವೇ?' ಎಂದು ಕೇಳಿದೆ. ಅವರಿಗೆ ಮೇರಿ ಕ್ಯೂರಿ ಹೆಸರು ತಿಳಿದಿತ್ತು. ಮತ್ತೇನೂ ತಿಳಿದಿರಲಿಲ್ಲ.

ನನಗೆ ನೋವೊಲಿಪ್ಕಿ ಬೀದಿಯ ನೆನಪು ಬಂತು. ಮೇರಿ ಕ್ಯೂರಿ ಬೆಳೆದದ್ದು ಅದೇ ಬೀದಿಯ ನಂಬರ್ 11ರ ಮನೆಯಲ್ಲಿ. ನಾನು ಕೇಳಿದೆ:

'ನಿಮಗೆ ನೋವೊಲಿಪ್ಕಿ ಬೀದಿ ಎಲ್ಲಿದೆ ಗೊತ್ತಾ?'

'ಅಯ್ಯೋ, ನಾವು ಇರೋದು ಅದೇ ಬೀದಿಯಲ್ಲಿ. ಹೋಗಬೇಕಾ?'

'ಹೌದು, ತೋರಿಸುತ್ತೀರಾ? ಎಷ್ಟು ದೂರ ಇದೆ?'

'ಇಲ್ಲಿಯೇ ಹತ್ತಿರ ಇದೆ. ನಿಮಗೇಕೆ ಅದರಲ್ಲಿ ಆಸಕ್ತಿ?'

'ಅಲ್ಲಿಯ 11ನೇ ನಂಬರ್ ಮನೆಯಲ್ಲಿಯೇ ಮೇರಿ ಕ್ಯೂರಿ ತನ್ನ ಬಾಲ್ಯ ಕಳೆದಿದ್ದು. ನಾನು ಆ ಸ್ಥಳ ನೋಡಲೇಬೇಕು. ನಾನು ಆಕೆಯ ಜೀವನಚರಿತ್ರೆಯನ್ನು ಬರೆಯುತ್ತಿದ್ದೇನೆ'.

'ಮೇರಿ ಕ್ಯೂರಿ ವಿಚಾರ ಗೊತ್ತಿಲ್ಲ. ಆ ರಸ್ತೆಯನ್ನು ತೋರಿಸುತ್ತೇವೆ ಬನ್ನಿ'.

ನಮ್ಮನ್ನು ನಡೆಸಿದರು, ನಡೆಸಿದರು. ಸುಸ್ತಾಗಿ ಹೋದೆವು. ಕೊನೆಗೂ ರಸ್ತೆ ಸಿಕ್ಕಿತ್ತು. ನನ್ನ ಉತ್ಸಾಹ ಇಮ್ಮಡಿಯಾಗಿ ನಂಬರ್ 11 ಹುಡುಕಿಕೊಂಡು ಹೊರಟೆ.

## ಸಿಕ್ಕಿತು ಆ ಮನೆ!

ಆ ಮನೆಯ ರಸ್ತೆಗೆ ಮುಖವಾದ ಗೋಡೆಯಲ್ಲಿ ಆಧುನಿಕ ಚಿತ್ರವೊಂದಿತ್ತು. ಅದನ್ನು ನಾನು ಕೆಲವು ಪುಸ್ತಕಗಳಲ್ಲಿ ಮತ್ತು ಗೂಗಲ್‌ನಲ್ಲಿ ನೋಡಿದ್ದೆ. ನನ್ನ ಪುಸ್ತಕದಲ್ಲಿಯೂ ಸೇರಿಸಿದ್ದೆ.



ನಂಬರ್ 11, ನೋವೊಲಿಪ್ಕಿ ಬೀದಿ, ಮೇರಿ ಕ್ಯೂರಿ ಬೆಳೆದ ಮನೆ ಇಲ್ಲಿತ್ತು

